ಕೇಂದ್ರ ಸರ್ಕಾರದ ನ್ಯಾಷನಲ್ ಮ್ಯಾನುಫಾಕ್ಚರಿಂಗ್ ಪಾಲಿಸಿ (NMP) ಪ್ರಕಾರ ತುಮಕೂರು ಜಿಲ್ಲೆಯ ವಸಂತನರಸಾಪುರದಲ್ಲಿ ರಾಷ್ಟ್ರೀಯ ಬಂಡವಾಳ ಹೂಡಿಕೆ ಮತ್ತು ಉತ್ಪಾದನಾ ವಲಯ (NIMZ) ವನ್ನು 13327 ಎಕರೆ ಜಮೀನಿನಲ್ಲಿ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಯೋಜನೆಯ ಅನುಷ್ಠಾನದಿಂದ ಜಿಲ್ಲೆಯಲ್ಲಿ ಅನೇಕ ರೀತಿಯ ಕೈಗಾರಿಕೆಗಳು ಸ್ಥಾಪನೆಯಾಗಲಿದ್ದು, ಜಿಲ್ಲೆಯಲ್ಲಿ ಸುಮಾರು 2,50,000 ರಷ್ಟು ಜನರಿಗೆ ಉದ್ಯೋಗ (ನೇರ : 1,00,000 ಮತ್ತು ಪರೋಕ್ಷ: 150.000) ದೊರೆಯಲಿದ್ದು ಜಿಲ್ಲೆಯ ಸಮಗ್ರ ಅಭಿವೃದ್ಧಿಯಾಗಲಿದೆ, ಈ ಯೋಜನೆಗೆ ಕೇಂದ್ರ ಸರ್ಕಾರದಿಂದ (Department of Industrial Policy & Promotion-DIPP) ಈಗಾಗಲೇ ತಾತ್ವಿಕ ಅನುಮೋದನೆ (In-Principle approval) ಪಡೆಯಲಾಗಿದೆ. ತಾಂತ್ರಿಕ ಸಾಧ್ಯತಾ ವರದಿಯನ್ನು ತಯಾರಿಸಲಾಗಿದ್ದು, NIMZ ನ ಅಂತಿಮ (formal) ಅನುಮೋದನೆಗೆ ಪ್ರಸ್ತಾವನೆ ಕಳುಹಿಸಿಕೊಡಲು ಕ್ರಮ ವಹಿಸಲಾಗುತ್ತಿದೆ.

ಕರ್ನಾಟಕ ಪೊಲೀಸ್ ಕಾಯ್ದೆ ತಿದ್ದುಪಡಿ

1152 (1822) ಡಾ॥ ರಫೀಕ್ ಅಹ್ಮದ್ ಎಸ್. (ತುಮಕೂರು ನಗರ) :– ಮಾನ್ಯ ಗೃಹ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ಸ್ವಾತಂತ್ರ್ಯ ನಂತರ ರಚಿತವಾದ ಕರ್ನಾಟಕ ಪೊಲೀಸ್ ಕಾಯ್ದೆ (ಕೆ.ಪಿ.ಆಕ್ಟ್) ಯನ್ನು ಪ್ರಸ್ತುತ ತಿದ್ದುಪಡಿ ಮಾಡುವ ಪ್ರಸ್ತಾಪನೆ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಂಡಿದೆ ?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು) :–

(ಅ) ಕರ್ನಾಟಕ ಪೊಲೀಸ್ ಕಾಯ್ದೆ (ಕೆ.ಪಿ.ಆಕ್ಟ್) ನ್ನು 2012 ಮತ್ತು 2013 ಗಳಲ್ಲಿ ಈಗಾಗಲೇ ತಿದ್ದುಪಡಿ ಮಾಡಲಾಗಿದೆ.

(ಆ) ಉದ್ಭವಿಸುವುದಿಲ್ಲ.

ಮುಜರಾಯಿ ದೇವಸ್ಥಾನಗಳ ನವೀಕರಣ

1153 (1823) ಡಾ॥ ರಫೀಕ್ ಅಹ್ಮದ್ ಎಸ್. (ತುಮಕೂರು ನಗರ) :– ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ರಾಜ್ಯದಲ್ಲಿರುವ ಮುಜರಾಯಿ ದೇವಾಲಯಗಳೆಷ್ಟು ; ಕಳೆದ ಮೂರು ವರ್ಷಗಳಲ್ಲಿ ಅವುಗಳ ನವೀಕರಣಕ್ಕಾಗಿ ಮಾಡಿರುವ ವೆಚ್ಚ ಎಷ್ಟು ;